ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ:ಕೆಎಸ್ಐಸಿಪಿಎಸ್/ಮ.ರ/ಕೋವಿಡ್-19/2020-21

ನಿರ್ದೇಶನಾಲಯ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಾಣಾ ಯೋಜನೆ
ಬೆಂಗಳೂರು. ದಿನಾಂಕ:28.08.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
30 ಜಿಲ್ಲೆಗಳು.

ಮಾನ್ಯರೆ,

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಹಾಗೂ ಸಮಗ್ರ ಮಕ್ಕಳ ರಕ್ಷಾಣಾ ಯೋಜನೆಗೆ ಸಂಬಂಧಪಟ್ಟ ಯಾವುದೇ ಮಗು ಮತ್ತು ಸಿಬ್ಬಂದಿ ಹಾಗು ಅಧಿಕಾರಿಗಳಿಗೆ ಕೋವಿಡ್ ಪಾಸಟೀವ್ ಬಂದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮದ ಬಗ್ಗೆ.

ಉಲ್ಲೇಖ: 1) ಆರೋಗ್ಯ ಇಲಾಖೆಯ ಹೆಲ್ತ್ ಅಡ್ವೈಜರಿ ದಿನಾಂಕ:01.06.2020
2) ಆರೋಗ್ಯ ಇಲಾಖೆ ಆದೇಶ ಸಂ.ಡಿಹೆಚ್ಎಸ್/ಪಿಎಸ್/143/2020-21 ದಿನಾಂಕ:03.08.2020

.....

ಮೇಲೆನ ವಿಷಯಕ್ಕೆ ಸಂಬಂಧಿಸಿದಂತೆ, ಕೊವಿಡ್-19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈಗಾಗಲೇ ಪ್ರಧಾನ ಕಛೇರಿಯಿಂದ ಹಲವಾರು ನಿರ್ದೇಶನಗಳನ್ನು ನೀಡಿ ಅನುಸರಿಸಲಾಗುತ್ತಿದೆ. ಹಾಗೂ ಉಲ್ಲೇಖ(1)ರ ಎಸ್ಒಪಿ/ಅಡ್ವೈಜರಿಯನ್ನೂ ಸಹ ಎಲ್ಲಾ ಜಿಲ್ಲೆಗಳಲ್ಲಿ ಅನುಪಾಲನೆಯಾಗುತ್ತಿರುವ ಬಗ್ಗೆ ಅನುಸರಿಸಲಾಗುತ್ತಿದೆ. ಸದರಿ ಎಸ್ಒಪಿ/ಅಡ್ವೈಜರಿಯನ್ನು ಸೂಕ್ತ ರೀತಿಯಲ್ಲಿ ಅನುಪಾಲನೆ ಮಾಡಲು ಮತ್ತೊಮ್ಮೆ ಈ ಪತ್ರದ ಮುಖಾಂತರ ಪುನರುಚ್ಚರಿಸಲಾಗಿದೆ. ಅಲ್ಲದೇ ಕೋವಿಡ್-19ಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು COVID-DCPOs Whatsapp group ಮುಖಾಂತರ ರಿಯಲ್ ಟೈಮ್‌ನಲ್ಲಿ ಕೇಂದ್ರ ಕಛೇರಿಗೆ ವರದಿಸಲು ಈಗಾಗಲೇ ಹಲವಾರು ಬಾರಿ ತಿಳಿಸಿದ್ದಾಗ್ಯೂ, ಕೋವಿಡ್-19 ಪಾಸಟೀವ್ ಪ್ರಕರಣಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ರಿಯಲ್‌ಟೈಮ್‌ನಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು COVID-DCPOs Whatsapp group ಮುಖಾಂತರ ಸಮರ್ಪಕವಾಗಿ ಸಲ್ಲಿಸದಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇನ್ನು ಮುಂದೆ ಇದನ್ನು ಮರುಕಳಿಸದಂತೆ ಎಚ್ಚರವಹಿಸಲು ಸೂಚಿಸಿದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಒಂದು ವೇಳೆ ಕೋವಿಡ್-19 ಪಾಸಟೀವ್ ಬಂದ ಪಕ್ಷದಲ್ಲಿ ಸಂಬಂಧಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕೂಡಲೇ ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ವಿಷಯಗಳಿಗೆ ಉಲ್ಲೇಖ(2)ರ ಆರೋಗ್ಯ ಇಲಾಖೆಯ ಆದೇಶದಂತೆ ನೇಮಕವಾದ ರಾಜ್ಯಮಟ್ಟದ ನೋಡಲ್ ಅಧಿಕಾರಿಯನ್ನು ಸಂಪರ್ಕಿಸುವುದು ಹಾಗೂ ಅವರ ಮಾರ್ಗದರ್ಶನದಂತೆ ತೆಗೆದುಕೊಳ್ಳಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ತುರ್ತು ಸಂದರ್ಭದಲ್ಲಿ ತೆಗೆದುಕೊಳ್ಳಲು ಈ ಮೂಲಕ ತಿಳಿಸಿದೆ.

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳು/ಸಿಬ್ಬಂದಿಗಳು/ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು/ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗೆ ಸಂಬಂಧಿಸಿದಂತೆ ಹೀಗೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆಗೆ ಸಂಬಂಧಪಟ್ಟ ಪ್ರತಿ ಕೋವಿಡ್-19 ಪಾಸಟೀವ್ ಕೇಸ್ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಆಗಿಂದ್ದಾಗೇ ತಕ್ಷಣ ರಿಯಲ್ ಟೈಮ್‌ನಲ್ಲಿ **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು** COVID-DCPOs Whatsapp group ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು ಕಡ್ಡಾಯವೆಂದು ತಿಳಿಯತಕ್ಕದ್ದು.

ನಿರ್ದೇಶಕರಿಗೆ ದೂರವಾಣಿ ಮುಖಾಂತರ ಕೋವಿಡ್ ಪಾಸಟೀವ್ ಪ್ರಕರಣದ ಬಗ್ಗೆ ಮಾಹಿತಿಯನ್ನು ತಕ್ಷಣ ತಿಳಿಸುವುದಲ್ಲದೇ ಸಮಗ್ರ ಮಕ್ಕಳ ರಕ್ಷಣಾ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಕೋವಿಡ್ ಪಾಸಟೀವ್ ಪ್ರಕರಣಗಳ ವಿಚಾರದಲ್ಲಿ ರಿಜಲ್ಟ್ ಬಂದ ತಕ್ಷಣದಿಂದ ಅವರು ಗುಣಮುಖರಾಗಿ ಸಂಪೂರ್ಣ ನಾರ್ಮಲ್ಸಿಗೆ ಬರುವವರೆಗೆ ನಿರಂತರವಾಗಿ ರಿಯಲ್ ಟೈಮ್‌ನಲ್ಲಿ COVID-DCPOs Whatsapp group ಮುಖಾಂತರ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು ಕಡ್ಡಾಯವೆಂದು ತಿಳಿಯತಕ್ಕದ್ದು.

ತಮ್ಮ ವಿಶ್ವಾಸಿ,

28.08.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

F/Director ICPS/ICPS office Note